ಪ್ರವೇಶಕ್ಕೆ ಅರ್ಹತೆಯನ್ನು ಸ್ಥಾಪಿಸಬೇಕಾದ ಮಾರ್ಗದ ದಿಕ್ಕುದೆಸೆ ಹಾಗೇ ಉಳಿಯಿತು. ಇದರಿಂದಾಗಿ ಎರಡು ಬದಲಾವಣೆಗಳಾದವು. ಒಂದು – ಅರ್ಹತೆಯನ್ನು ಪಡೆಯಲು ಸಾಧ್ಯವಾದರೆ, ಐಐಟಿಯಲ್ಲಿ ಸೀಟು ಸಿಗುವ ಸಾಧ್ಯತೆಯಿದೆ ಎನ್ನುವ ನಂಬಿಕೆ ಮಧ್ಯಮಜಾತಿಗಳಿಗೆ ಬಂತು. ಮತ್ತು ಅದನ್ನು ಪಡೆಯಲು ಮಾಡಬೇಕಾದ ತಯಾರಿಗಾಗಿ ಕೋಚಿಂಗ್ ಫ್ಯಾಕ್ಟರಿಗಳು ನಿರ್ಮಾಣವಾದವು. ಇದರಿಂದ ಕ್ಯಾಂಪಸ್ಸುಗಳಲ್ಲಿ ಇಂಗ್ಲಿಷ್, ಹಿಂದಿಯಲ್ಲದೆ ಬೇರೆ ಭಾಷೆಗಳೂ, ವಿದ್ಯಾರ್ಥಿಗಳು ಏರ್ಪಡಿಸಿದ ಭಿನ್ನ ಅಧ್ಯಯನ ಗುಂಪುಗಳೂ ಉಂಟಾದವು. ವೈವಿಧ್ಯದ ದೃಷ್ಟಿಯಿಂದ ಪರಿಸ್ಥಿತಿ ಸುಧಾರಿಸಿದರೂ, ಬೇರೆ ರೀತಿಯಲ್ಲಿ ಇದನ್ನು ಸಾಧಿಸಬಹುದಿತ್ತೇ ಎನ್ನುವುದನ್ನು ಕೇಳಿಕೊಳ್ಳಬೇಕು.

ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಇರುವ ವ್ಯವಸ್ಥೆ, ಉನ್ನತ ವಿದ್ಯಾ ಸಂಸ್ಥೆಗಳಲ್ಲಿ ಬೇಕಿರಬಹುದಾದ ವೈವಿಧ್ಯವನ್ನು ಸಾಧಿಸಲು ಒಂದು ಮಾರ್ಗಸೂಚಿಯನ್ನು ನೀಡಬಹುದು. ಸ್ಥಳೀಯ ಮಾಧ್ಯಮದ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದವರು, ಗ್ರಾಮೀಣ ಪ್ರದೇಶದ ಶಾಲೆಯಲ್ಲಿ ಕಲಿತವರು, ಹಿಂದುಳಿದವರು, ಮಹಿಳೆಯರು – ಹೀಗೆ ಅನೇಕ ಅಂಶಗಳನ್ನು ಗುರುತಿಸಿ ಆ ವರ್ಗಗಳನ್ನೆಲ್ಲಾ ಒಳಗೊಳ್ಳುವ ಪ್ರವೇಶ ಪದ್ಧತಿ ಅಲ್ಲಿದೆ. ಹೀಗಾಗಿ, ವೈವಿಧ್ಯ ವಿಚಾರಧಾರೆ, ವಾದ ಮಂಡನೆ ಮತ್ತು ವಿನಿಮಯ ಆಗುವ ಸಾಧ್ಯತೆಯಿದೆ. ಆಧುನಿಕ ಔದ್ಯೋಗಿಕ ಕ್ರಾಂತಿಯಿಂದಾದ ಒಂದು ಲಾಭ ಕೇಂದ್ರೀಕರಣದಿಂದ ಉಂಟಾಯಿತೆಂದು ಅರ್ಥಶಾಸ್ತ್ರಜ್ಞ ಎಡ್ಮಂಡ್ ಫೆಲ್ಪ್ಸ್ ಹೇಳುತ್ತಾರೆ. ಆ ಲಾಭ – ಒಂದೇ ಜಾಗದಲ್ಲಿ ಜನ ಸೇರಿ ಒಟ್ಟಿಗೆ ಕೆಲಸ ಮಾಡುವುದರಿಂದ ಆಗಬಹುದಾದ ವಿಚಾರ ವಿನಿಮಯ. ಈ ರೀತಿಯ ಲೇನ್‌ದೇನ್ ಮತ್ತು ಚರ್ಚೆಗಳು ಹೊಸತನ್ನು ಪಸರಿಸಲು ಸಹಾಯಕವಾಗಿತ್ತು ಎನ್ನುತ್ತಾರೆ.



ಅಜಂತಾ ಸುಬ್ರಮಣಿಯನ್

ವಿಶ್ವವಿದ್ಯಾಲಯಗಳು, ಉನ್ನತ ವಿದ್ಯಾಸಂಸ್ಥೆಗಳು ವೈವಿಧ್ಯ ಮತ್ತು ವಿಚಾರ ವಿನಿಮಯದ ಕೇಂದ್ರಗಳಾಗಬೇಕಿದ್ದರೆ – ನಮ್ಮೊಳಗಿದ್ದೂ ನಮ್ಮಂತಾಗದಿರುವಂತಹ ವೈವಿಧ್ಯಮಯ ವಿಚಾರಗಳ, ಭಿನ್ನ ಜೀವನಾನುಭವಗಳ ಜನ ಈ ಶ್ರೇಷ್ಠತೆಯ ಕೋಟೆಯ ಸೀಮೋಲ್ಲಂಘನ ಮಾಡಬೇಕು. ಹಾಗೆಯೇ ಪ್ರತಿಭೆಯನ್ನು, ಶ್ರೇಷ್ಠತೆಯನ್ನು ಭಿನ್ನವಾಗಿ ಪರಿಭಾಷಿಸಲೂ ಬೇಕು.

ಕೆಲವು ಸಂಸ್ಥೆ ಮತ್ತು ಸ್ಥಾವರಗಳನ್ನು ನಾವು ಪವಿತ್ರ ಎಂದು ಪೂಜಿಸುತ್ತಾ ದೂರದಲ್ಲಿಯೇ ನಿಂತು ಅವನ್ನು ಗೌರವಾದರಗಳಿಂದ, ಭಕ್ತಿಯಿಂದ ನೋಡುತ್ತೇವೆ. ಆದರೆ, ಆ ಸ್ಥಾವರಗಳ ಸ್ಥಾನ, ಅವುಗಳು ಪಡೆಯುವ ದೇಣಿಗೆಯನ್ನು ನಿಕಷಕ್ಕೆ ಒಡ್ಡಬೇಕು ಎನ್ನುವುದನ್ನು ಅಜಂತಾ ತಮ್ಮ ಪುಸ್ತಕದಲ್ಲಿ ನಿರೂಪಿಸುತ್ತಾರೆ. ಜಾತಿವ್ಯವಸ್ಥೆಯ ಬಗ್ಗೆ ಭಿನ್ನವಾಗಿ ಮತ್ತು ಸಕಾರಾತ್ಮಕವಾಗಿ ಆತ್ಮಮಥನ ಮಾಡಿಕೊಳ್ಳಲು ಅವರ ಬರವಣಿಗೆ ಪ್ರೇರೇಪಿಸುತ್ತದೆ. ಹೊಸ ಶ್ರೇಷ್ಠತೆಯ ಸ್ಥಾವರಗಳನ್ನು ನಿರ್ಮಿಸುವಾಗ ನಾವು ಏನೆಲ್ಲಾ ಮರೆತು ಮೆರೆಯುತ್ತೇವೆ ಎನ್ನುವುದಕ್ಕೆ ಉದಾಹರಣೆಯಾಗಿ ಉನ್ನತ–ಶ್ರೇಷ್ಠ–ಭಿನ್ನ ಸಂಸ್ಥೆಗಳನ್ನು ಹುಟ್ಟುಹಾಕಿರುವ ನಮ್ಮ ನೀತಿಯನ್ನು ನೋಡಿಕೊಳ್ಳಬೇಕು. ಹೊಸ ಜಾತಿಗಳು ಹುಟ್ಟುವಾಗ ಅವು ಹಳೆಯದನ್ನು ಧ್ವಂಸಮಾಡದೇ ಹುಟ್ಟಿದರೆ ನಾವು ಟ್ರೆಡ್‌ಮಿಲ್ಲಿನ ಮೇಲೆ ನಡೆದಂತೆ ಆಗುತ್ತದೆ. ಮುಂದುವರೆಯುತ್ತಿದ್ದೇವೆ ಎನ್ನುವ ಭಾವನೆಯಿರುತ್ತದೆ, ಪ್ರಯಾಸ ಕಾಣುತ್ತದೆ. ಆದರೆ, ನಾವೆಲ್ಲ ನಿಂತಲ್ಲೇ ಕದಮ್ ತಾಲ್ ಹಾಕುತ್ತಿರುತ್ತೇವೆ. ಆಗಾಗ ಅಲ್ಲಿಂದ ಇಳಿದು ನಮ್ಮ ಕಾಲಕೆಳಗಿರುವ ಭೂಮಿಯ ಸ್ಪರ್ಶ ಪಡೆಯುವುದು ಒಳ್ಳೆಯದು. ಅಜಂತಾ ತಮ್ಮ ಪುಸ್ತಕದ ಮೂಲಕ ಆ ಸ್ಪರ್ಶವನ್ನು ಒದಗಿಸಿಕೊಡುತ್ತಾರೆ.

●